**ದಿನಾಂಕಃ 14.02.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ **1 ಮತ್ತು 2 ನೇ ಪ್ರತಿವಾದಿ ಪರ** ಶ್ರೀ. ಹೆಚ್ ಎನ್ ಬಿ ಎನ್ **ವಕೀಲರಿಂದಃ**

ನಾನು 5 ನೇ ತರಗತಿಯವರೆಗೂ ವಿಧ್ಯಾಭ್ಯಾಸ ಮಾಡಿರುತ್ತೇನೆ. 2010 ರಲ್ಲಿ ನಮ್ಮ ಜಾಗದಲ್ಲಿ ತಳಪಾಯವನ್ನು ತೆಗೆದು ಭಾಗಶಃ ಕಟ್ಟಡ ನಿರ್ಮಿಸಿದ್ದೇನೆ ಎಂದರೆ ಸರಿ. ಸದರಿ ಕಟ್ಟಡ ನಿರ್ಮಾಣ ಮಾಡಲು ಸಂಬಂಧಪಟ್ಟ ಪ್ರಾಧಿಕಾರದಿಂದ ಪರವಾನಿಗೆ ಪಡೆದುಕೊಂಡಿರುವುದಿಲ್ಲ. ನಮ್ಮ ಆಸ್ತಿಯ ಪೂರ್ವಕ್ಕೆ 3 ನೇ ಪ್ರತಿವಾದಿಯ ಆಸ್ತಿ ಬರುತ್ತದೆ ಎಂದರೆ ಸರಿಯಲ್ಲ. ನಾನು ನಿರ್ಮಿಸಿರುವ ತಳಪಾಯದಲ್ಲಿ ಮನೆ ನಿರ್ಮಿಸಲು ಸರ್ಕಾರದಿಂದ ಯಾವುದೇ ಅನುದಾನವನ್ನು ಪಡೆದುಕೊಂಡಿರುವುದಿಲ್ಲ. ಸದರಿ ಆಸ್ತಿಯ ಖಾತೆಯು ನನ್ನ ಮತ್ತು ನನ್ನ ಮಗಳ ಹೆಸರಿನಲ್ಲಿ ಇರುತ್ತದೆ. ದಾವಾ 1 ನೇ ಅನುಸೂಚಿ ಸ್ವತ್ತಿನ ಖಾತೆಯು ನನ್ನ ಹೆಸರಿನಲ್ಲಿ ಮತ್ತು ದಾವಾ 2 ನೇ ಅನುಸೂಚಿ ಸ್ವತ್ತಿನ ಖಾತೆಯು ನನ್ನ ಮಗಳ ಹೆಸರಿನಲ್ಲಿ ಇರುತ್ತದೆ. ದಾವಾ 1 ನೇ ಅನುಸೂಚಿ ಸ್ವತ್ತಿನ ಖಾತೆಯು ನನ್ನ ಹೆಸರಿನಲ್ಲಿ ಇರುವ ದಾಖಲಾತಿಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ದಾವಾ ಅನುಸೂಚಿ ಸ್ವತ್ತಿನ ಪೂರ್ವಕ್ಕೆ 1 ಮತ್ತು 2 ನೇ ಪ್ರತಿವಾದಿಗಳ ಆಸ್ತಿ ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳ ಅಕ್ಕಪಕ್ಕದಲ್ಲಿ 1 ಮತ್ತು 2 ನೇ ಪ್ರತಿವಾದಿಗಳ ಆಸ್ತಿಗಳು ಬರದೇ ಇದ್ದರೂ ಸಹ ಅವರನ್ನು ಅನಾವಶ್ಯಕವಾಗಿ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿದಾರರಿಗೆ ದಿನಾಂಕ 01.05.2010 ರ ತಿಳುವಳಿಕೆ ಪತ್ರದ ನಕಲನ್ನು ತೋರಿಸಲಾಗಿ ಸಾಕ್ಷಿದಾರರು ಅದನ್ನು ನೋಡಿ ಒಪ್ಪಿ ಕೊಂಡಿದ್ದರಿಂದ ಸದರಿ ತಿಳುವಳಿಕೆ ಪತ್ರವನ್ನು ನಿಡಿ-7 ಎಂದು ಗುರುತಿಸಲಾಯಿತು. ದಿನಾಂಕ 01.05.2010 ರಂದು ನಾನು ಪ್ರತಿವಾದಿಗಳಿಗೆ ನನ್ನ ವಕೀಲರ ಮೂಲಕ ನಿಡಿ-7 ರಂತೆ ತಿಳುವಳಿಕೆ ಪತ್ರ ನೀಡಿದ್ದೇನೆ ಎಂದರೆ ಸರಿ. ಈ ದಾವೆಯಲ್ಲಿ ರಾಜಮ್ಮರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯು ತನ್ನ ಭಾಗಕ್ಕೆ ಬಂದ ಆಸ್ತಿಯಲ್ಲಿ 30x40 ಅಳತೆಯ ಆರ್ಸಿಸಿ ಮನೆಯನ್ನು ತನ್ನ ಹೆಂಡತಿ ರಾಜಮ್ಮರವರಿಗೆ ಮತ್ತು 30x40 ಅಳತೆಯ ನಿವೇಶನವನ್ನು ತನ್ನ ಸೊಸೆಯಾದ ಸುಂದ್ರಮ್ಮರವರಿಗೆ ನೀಡಿ ಖಾತೆ ಬದಲಾವಣೆ ಮಾಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ನಾನು ನಿಡಿ-6 ರ ತಿಳುವಳಿಕೆ ಪತ್ರದಲ್ಲಿ ನಮೂದಿಸಿದ್ದೇನೆ ಎಂದರೆ ಸರಿಯಲ್ಲ.

ನನಗೆ ಒಟ್ಟು 11 ಜನ ಸಹೋದರ ಸಹೋದರಿಯರು ಇದ್ದಾರೆ. ನಮ್ಮ ಕುಟುಂಬದ ಆಸ್ತಿಗಳನ್ನು 1972 ರಲ್ಲಿ ಲಿಖಿತವಾಗಿ ವಿಭಾಗ ಮಾಡಿಕೊಂಡಿರುತ್ತೇವೆ. ಸದರಿ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಅವಶ್ಯಕತೆ ಇರುವುದಿಲ್ಲ. ದಾವಾ 1 ನೇ ಅನುಸೂಚಿ ಸ್ವತ್ತು ವಿಭಾಗದಲ್ಲಿ ನನ್ನ ಸಹೋದರ ಚಿಕ್ಕಮಹದೇವರವರ ಭಾಗಕ್ಕೆ ಹೋಗಿದೆ ಎಂದರೆ ಸರಿಯಲ್ಲ. ಸದರಿ ವಿಚಾರ ತಿಳಿದುಬರುತ್ತದೆ ಎಂಬ ದುರುದ್ದೇಶದಿಂದ ಸದರಿ ವಿಭಾಗ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳ ಖಾತೆ ಯಾರ ಹೆಸರಿನಲ್ಲಿದೆ ಎಂದು ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು ಸ್ವತಂತ್ರವಾಗಿ ಸಲ್ಲಿಸಿರುತ್ತೇನೆ. ದಾವಾ ಅನುಸೂಚಿ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿಗಳಾಗಿರುವುದರಿಂದ ನಾನು ಒಬ್ಬನೇ ಈ ದಾವೆಯನ್ನು ಸಲ್ಲಿಸಲು ಕಾನೂನಿನ ಮೂಲಕ ಅವಕಾಶ ಇಲ್ಲ ಎಂದರೆ ಸರಿಯಲ್ಲ. ದಾವಾ 1 ನೇ ಅನುಸೂಚಿ ಸ್ವತ್ತು ನಮ್ಮ ಕುಟುಂಬದ ವಿಭಾಗದಲ್ಲಿ ನನ್ನ ಸಹೋದರ ಚಿಕ್ಕಮಹದೇವರವರ ಭಾಗಕ್ಕೆ ಹೋಗಿರುವುದರಿಂದ ನನಗೆ ಈ ದಾವೆ ಸಲ್ಲಿಸಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳನ್ನು ನಾನು ಈ ದಾವೆಯಲ್ಲಿ ತಪ್ಪಾಗಿ ಪಕ್ಷಗಾರರನ್ನಾಗಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ